**ಓ ಎಸ್ ನಂಃ 70/2012**
**ಪಿ.ಡಬ್ಲ್ಯೂ -1**
**ದಿನಾಂಕಃ 16.12.2025**

**<u>ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ 2 ನೇಪ್ರತಿವಾದಿ ಪರ ಶ್ರೀ ಎನ್ ಜಿ ವಕೀಲರಿಂದಃ</u>**

ಸತ್ತಪ್ಪನಿಗೆ ತಿಮ್ಮಕ್ಕ , ಚಿತ್ತಮ್ಮ , ಚಿಕ್ಕಪ್ಪ ಮತ್ತು ಚಿತ್ತಪ್ಪ ಎಂಬ ಮಕ್ಕಳು. ನಿಪಿ-13 ರಲ್ಲಿ ತಿಮ್ಮಕ್ಕ ಮತ್ತು ಚಿತ್ತಮ್ಮನನ್ನು ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಸಲ್ಲಿಸಿರುವ ಪ್ರತಿವಾದ ಪತ್ರದಲ್ಲಿ ಇರುವಂತಹ 1 ರಿಂದ 7 ಪ್ರತಿವಾದ ಪತ್ರದ ಸ್ವತ್ತುಗಳ 2 ನೇ ಪ್ರತಿವಾದಿಗೆ ಸೇರಿರುತ್ತದೆ ಎಂದರೆ ಸಾಕ್ಷಿಯು 3 ಜನಕ್ಕೆ ಸೇರಿರುತ್ತದೆ ಎಂದು ನುಡಿದಿರುತ್ತಾರೆ. ಈಗ ಪಹಣಿಗಳು ಶಾಂತಮ್ಮ ಪೌವತಿ ಆಧಾರದ ಮೇಲೆ ಇರುತ್ತದೆ ಎಂದರೆ ಸಾಕ್ಷಿಯು 3 ಜನ ಮಕ್ಕಳಿಗೂ ಇರುತ್ತದೆ ಎಂದು ನುಡಿದಿರುತ್ತಾರೆ. ನಾನು 3 ಜನಕ್ಕೂ ಭಾಗ ಬೇಕು ಎಂದು ದಾವೆಯನ್ನು ಸಲ್ಲಿಸಿರುತ್ತೇನೆ. ಪ್ರತಿವಾದ ಪತ್ರದ ಸ್ವತ್ತುಗಳು ಸತ್ತಪ್ಪನವರ ಭಾಗಕ್ಕೆಬಂದಿರುವ ಸ್ವತ್ತುಗಳಾಗಿರುತ್ತವೆ ಎಂದರೆ ಸಾಕ್ಷಿಯು 3 ಜನಕ್ಕೆ ಬಂದಿರುವಂತಹ ಭಾಗಗಳಾಗಿರುತ್ತವೆ ಎಂದು ನುಡಿದಿರುತ್ತಾರೆ. ಸತ್ತಪ್ಪನ ಮರಣಾನಂತರ ಖಾತೆಯು ಅವರ ಪತ್ನಿಯಾದ ಶಾಂತಮ್ಮನವರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ಪಹಣಿ ಚಿಕ್ಕಣ್ಣನ ಮಕ್ಕಳಾದ ಸತ್ಯಪ್ಪ , ನನ್ನ ತಂದೆ ಪಹಣಿ ಕರಿಯಪ್ಪ ಮತ್ತು ಕಾರಪ್ಪ ಯಾನೇ ಚಿತ್ತಪ್ಪ ಸುಮಾರು ಇಸವಿ 1950 ರಲ್ಲಿ ವಿಭಾಗವಾಗಿದ್ದಾರೆ ಎಂದರೆ ಸರಿ. ಪಹಣಿ ಕರಿಯಪ್ಪನಿಗೆ ವಿಭಾಗದಲ್ಲಿ ಮೇಣಸಿನೋಡು ಗ್ರಾಮದ ಸರ್ವೇ ನಂ. 68/4 ರಲ್ಲಿ 1 ಎಕರೆ 20 ಗುಂಟೆ ನನ್ನ ತಂದೆಯ ವಿಭಾಗಕ್ಕೆ ಬಂದಿರುತ್ತದೆ ಎಂದರೆ ಸರಿ.

ದಿಃ 05.09.1965 ರಲ್ಲಿ ಕರಿಯಪ್ಪ ತಂದೆ ಹುಚ್ಚಪ್ಪ ನವರಿಗೆ ಸದರಿ ದಾವಾ ಸ್ವತ್ತನ್ನು ಮಾರಾಟ ಮಾಡಿರುತ್ತೀರಿ ಎಂದರೆ ನನಗೆ ಗೊತ್ತಿಲ್ಲ. ಸರ್ವೇ ನಂಬರ್ 68/4 ರಲ್ಲಿ 3 ಎಕರೆ 15 ಗುಂಟೆ ನನ್ನ ತಂದೆಯ ಭಾಗಕ್ಕೆಬಂದಿರುತ್ತದೆ ಎಂದರೆ ಸರಿ. ದಿಃ 18.10.1949 ರಲ್ಲಿ ಕರಿಯಪ್ಪ ತಂದೆ ಕಲ್ಲಹಳ್ಳಿ ಚಿಕ್ಕಣ್ಣ ನವರಿಗೆ ಮಾರಾಟ ಮಾಡಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನಾನಾಗಲಿ ನನ್ನ ತಂದೆಯಾಗಲೀ ಯಾವುದೇ ಸ್ವತ್ತನ್ನು ಮಾರಾಟ ಮಾಡಿರುವುದಿಲ್ಲ. ಸುಮಾರು 1950 ನೇ ಇಸವಿಯಲ್ಲಿ ಆದ ವಿಭಾಗದ ಬಗ್ಗೆ ಆದ ಯಾವುದೇ ಪತ್ರದ ಬಗ್ಗೆ ನನಗೆ ಗೊತ್ತಿಲ್ಲ. ಸರ್ವೇ ನಂ. 67 ರಲ್ಲಿ ಒಂದು ಕಡೆ , ಸರ್ವೇ ನಂ.68 ರಲ್ಲಿ ಎರಡು ಕಡೆ , ಸರ್ವೇ ನಂ.57 ರಲ್ಲಿ ಎರಡು ಕಡೆ , ಸರ್ವೇ ನಂ.33 ರಲ್ಲಿ ಎರಡು ಕಡೆ , ಸರ್ವೇ ನಂ.70 ರಲ್ಲಿ ಮೂರು ಕಡೆ ನನ್ನ ತಂದೆಯ ಹಿಸ್ಸೆಗೆ ಬಂದಿರುತ್ತದೆ. ಸಾಕ್ಷಿಯು ಮುಂದುವರೆದು ನಾನು ಮತ್ತೆ ದಾಖಲಾತಿಗಳನ್ನು ನೋಡಿ ಹೇಳಬಹುದು ಎಂದು ನುಡಿದಿರುತ್ತಾರೆ. ಇವು ನಮ್ಮ ತಂದೆಯ ಹಿಸ್ಸೆಗೆ ಬಂದಿರುತ್ತದೆ ಎಂದು ತೋರಿಸಲು ಯಾವುದೇ ದಾಖಲಾತಿಗಳು ನನ್ನ ಬಳಿ ಇರುವುದಿಲ್ಲ. ಖಾತೆದಾರರು ಸ್ವತ್ತುಗಳನ್ನು ಮಾರಿಕೊಂಡಿರುತ್ತಾರೆ. ಮಾರಿ ಉಳಿದಿರುವಂತಹ ಖಾತೆಗಳು ಸರಿ ಇರುತ್ತವೆ.

ಸರ್ವೇ ನಂ.70 ರಲ್ಲಿ1 ಎಕರೆ 23 ಗುಂಟೆ ಇದ್ದು ಅದರಲ್ಲಿ 7 ಗುಂಟೆಯನ್ನು ದಾಸಪ್ಪ ನವರಿಗೆ ಮಾರಾಟ ಮಾಡಿರುತ್ತೀರಿ ಎಂದರೆ ನನಗೆ ಗೊತ್ತಿಲ್ಲ. ಉಳಿದ 1 ಎಕರೆ 16 ಗುಂಟೆ ಸತ್ಯಪ್ಪನ ಭಾಗಕ್ಕೆ ಬಂದಿದ್ದು ಶಾಂತಮ್ಮನ ಹೆಸರಿನಲ್ಲಿ ಖಾತೆ ಇರುತ್ತದೆ ಎಂದರೆ ಸರಿ. ಈಗ ಹಾಲಿ ಖಾತೆ ದಾರರ ಹೆಸರಿನಲ್ಲಿ ಇರುವ ಸ್ವತ್ತಿಗೂ ನನಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ .

ಸರ್ವೇ ನಂ.33/7 ರಲ್ಲಿ ಸತ್ತಪ್ಪನವರಿಗೆ ಮಾತ್ರ ಹಿಸ್ಸೆ ಬಂದಿರುತ್ತದೆ ನನ್ನ ತಂದೆಗೆ ಬಂದಿರುವುದಿಲ್ಲ

ಎಂದರೆ ಸರಿಯಲ್ಲ. ದಾವಾ ಐಟಂ ನಂಬರ್ 6 ಸರ್ವೇ ನಂ. 67/1 ಪೂರ್ತಿಯಾಗಿ ಕರಿಯಪ್ಪನವರ ಹಿಸ್ಸೆಗೆ ಹೋಗಿರುತ್ತದೆ ಎಂದರೆ ಸರಿಯಲ್ಲ.

ಸರ್ವೇ ನಂ.68/3 ಬಿ ದಾವಾ ಸಿ ಷಡ್ಯೂಲ್ ನ 4 ನೇ ಸ್ವತ್ತು ಸತ್ತಪ್ಪನಿಗೆ ಬಂದಿರುವ ಸ್ವತ್ತಾಗಿರುತ್ತದೆ ಎಂದರೆ ಸರಿಯಲ್ಲ . ದಾವಾ ಬಿ ಷಡ್ಯೂಲ್ ನ 7 ನೇ ಸ್ವತ್ತು ಸರ್ವೇ ನಂ. 68/4 ಎ ಸತ್ಪನ ಭಾಗಕ್ಕೆ ಬಂದಿರುತ್ತದೆ ಎಂದರೆ ಸರಿಯಲ್ಲ. ಅವರ ಮರಣಾನಂತರ ಖಾತೆಯು ಅವರ ಪತ್ನಿಯಾದ ಶಾಂತಮ್ಮ ನವರಿಗೆ ಬಂದಿರುತ್ತದೆ ಎಂದರೆ ಸಾಕ್ಷಿ 3 ಜನಕ್ಕೆ ಬಂದಿರುತ್ತದೆ ಎಂದು ನುಡಿದಿರುತ್ತಾರೆ.

ದಿಃ 12.12.1964 ರಲ್ಲಿ ಶಾಂತಮ್ಮ ನವರು 1 ಎಕರೆಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಮಾರಾಟ ಮಾಡಿ ಉಳಿದ ಸ್ವತ್ತಿನಲ್ಲಿ ಪಿ ಎಲ್ ಡಿ ಬ್ಯಾಂಕ್ ನಲ್ಲಿ ಆಧಾರ ಮಾಡಿ ಸಾಲ ತೆಗೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಬಿ ಷಡ್ಯೂಲ್ ನ 2 ನೇ ಸ್ವತ್ತು ಒಟ್ಟು 1 ಎಕರೆ 23 ಗುಂಟೆ ಇರುತ್ತದೆ ಎಂದರೆ ಸರಿ . ಶಾಂತಮ್ಮ ನವರು ದಾಸಪ್ಪ ನವರಿಗೆ 1969-1970 ನೇ ಸಾಲಿನಲ್ಲಿ ಮಾರಾಟ ಮಾಡಿದ್ದು 1 ಎಕರೆ 16 ಗುಂಟೆ ಶಾಂತಮ್ಮ ನವರ ಬಳಿ ಇರುತ್ತದೆ ಎಂದರೆ ಸಾಕ್ಷಿಯು ಮಾರಾಟದ ವಿಚಾರ ಗೊತ್ತಿಲ್ಲ , 3 ಜನಕ್ಕೆ ಅದರಲ್ಲಿ ಅಧಿಕಾರ ಇದೆ ಎಂದು ನುಡಿದಿರುತ್ತಾರೆ . 1 ಎಕರೆ 16 ಎಕರೆ ಬಿಟ್ಟು 7 ಗುಂಟೆ ದಾಸಪ್ಪ ಬಿನ್ ತಿಮ್ಮಣ್ಣ ಇವರ ಹೆಸರಿನಲ್ಲಿ ಖಾತೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ದಾವಾ ಬಿ ಷಡ್ಯೂಲ್ ನ ದಾವಾ 3 ನೇ ಸ್ವತ್ತು ಸತ್ಯಪ್ಪ ಬಿನ್ ಪಹಣಿ ಚಿಕ್ಕಣ್ಣ ನವರ ಹೆಸರಿನಲ್ಲಿ

ಇದೆ ಎಂದರೆ ಸಾಕ್ಷಿಯು 3 ಜನಕ್ಕೆ ಅಧಿಕಾರ ಇದೆ ಎಂದು ನುಡಿದಿರುತ್ತಾರೆ. ದಾವಾ ಬಿ ಷಡ್ಯೂಲ್ ನ ದಾವಾ 1 ನೇ ಸ್ವತ್ತು ಸತ್ಯಪ್ಪ ಬಿನ್ ಪಹಣಿ ಚಿಕ್ಕಣ್ಣ ನವರ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿಯು 3 ಜನಕ್ಕೆ ಅಧಿಕಾರ ಇದೆ ಎಂದು ನುಡಿದಿರುತ್ತಾರೆ. ನನ್ನ ತಂದೆಗೆ ಬಂದಿರುವಂತಹ ಸ್ವತ್ತುಗಳನ್ನು ಈಗಾಗಲೇ ಮಾರಾಟ ಮಾಡಿರುವ ಕಾರಣ ದಾವಾ ಎ ಷಡ್ಯೂಲ್ ನಲ್ಲಿ ನನಗೆ ಯಾವುದೇ ಹಕ್ಕು , ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸಿ ಷಡ್ಯೂಲ್ ನ 3 ನೇ ಅಸ್ತಿ ದಿಃ 18.10.1949 ರಲ್ಲಿ ಕ್ರಯ ಆಗಿರುತ್ತದೆ ಎಂದರೆ ಸಾಕ್ಷಿಯು ಎಲ್ಲಾ ಸ್ವತ್ತುಗಳನ್ನು ಮಾರಾಟ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ದಾವಾ ಬಿ ಷಡ್ಯೂಲ್ ನ 2 ನೇ ಸ್ವತ್ತಿನಲ್ಲಿ ದಾಸಪ್ಪ ತಂದೆ ಕರಿಯಪ್ಪ ನವರು ಸ್ವಾಧೀನಾನುಭವದಲ್ಲಿ ಇರದ್ದಾರೆ ಎಂದರೆ ಸರಿ . ಉ ಳಿದ 1 ಎಕರೆ 16 ಗುಂಟೆಯಲ್ಲಿ ಶಾಂತಮ್ಮ ರವರು ಸ್ವಾಧೀನದಲ್ಲಿ ಇಾದ್ದರೆ ಎಂದರೆ ಸಾಕ್ಷಿ 3 ಜನಕ್ಕೆ ಅಧಿಕಾರ ಇದೆ ಎಂದು ನುಡಿದಿರುತ್ತಾರೆ. 1950 ರಲ್ಲಿ ವಿಭಾಗವಾದಾಗ ನಾನು ಹುಟ್ಟಿರಲಿಲ್ಲ ಎಂದರೆ ಸರಿ . ಹಾಗಾಗಿ ನನ್ನ ತಂದೆಗೆ ಯಾವ ಸ್ವತ್ತುಗಳು ಬಂದಿರುತ್ತವೆ ಎಂದು ನನಗೆ ನಿಖರವಾಗಿ ಗೊತ್ತಿಲ್ಲ ಎಂದರೆ ಸರಿಯಲ್ಲ . ಕರಿಯಪ್ಪ ಮತ್ತು ಚಿತ್ತಪ್ಪನಿಗೆ ಯಾವ ಸ್ವತ್ತುಗಳು ಬಂದಿತ್ತು ಎಂದು ನನಗೆ ಗೊತ್ತಿಲ್ಲ.

ನನಗೆ ಯಾವುದೇ ಅಧಿಕಾರ ಇಲ್ಲದೇ ಇದ್ದರೂ 2 ನೇ ಪ್ರತಿವಾದಿಯ ತಂದೆಯ ಹಿಸ್ಸೆಗೆ ಬಂದಿರುವಂತಹ ಸ್ವತ್ತನ್ನು ಲಪಟಾಯಿಸಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಷಡ್ಯೂಲ್ ಎ ಸ್ವತ್ತಿಗೆ ಸಂಬಂಧಿಸಿದಂತೆ ನಮ್ಮ ತಂದೆಯ ಹಿಸ್ಸೆಗೆ ಬಂದಿದೆ ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ . ಹಾಗೆ ಬಿ ಷಡ್ಯೂಲ್ ದಾವಾ ಸ್ವತ್ತುಗಳು 1 ಮತ್ತು 2 ನೇ ಪ್ರತಿವಾದಿಗೆ , ಸಿ ಷಡ್ಯೂಲ್ ಸ್ವತ್ತುಗಳು 4 ಮತ್ತು 5 ನೇ ಪ್ರತಿವಾದಿಗೆ

ಬಂದಿರುತ್ತದೆ ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ 2 ನೇ ಪ್ರತಿವಾದಿಯು ಸಲ್ಲಿಸಿರುವಂತಹ ಪ್ರತಿವಾದ ಪತ್ರದಲ್ಲಿ ಇರುವಂತಹ ಸ್ವತ್ತುಗಳು 2 ನೇ ಪ್ರತಿವಾದಿಯ ಹಿಸ್ಸೆಗೆ ಬಂದಿರುವಂತಹ ಸ್ವತ್ತುಗಳಾಗಿರುತ್ತವೆ ಎಂದರೆ ಸಾಕ್ಷಿಯು 3 ಜನಕ್ಕೆ ಬಂದಿರುವ ಸ್ವತ್ತುಗಳಾಗಿರುತ್ತವೆ ಎಂದು ನುಡಿದಿರುತ್ತಾರೆ ನಾನು ಸರಿಯಾದ ಮಾಹಿತಿ ಇಲ್ಲದೇ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(ಪ್ರತಿವಾದಿ 3, 4 , 8 ರಿಂದ 10 ರವರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು , ಕಾಲಾವಕಾಶ ನೀಡಿ ಮುಂದೂಡಲಾಯಿತು).**

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ

ಅಪರ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನಾಯ್ಯಾಧೀಶರು, ಹೊಸದುರ್ಗ.